## ಬ್ಯಾಂಡಿಝಿಪ್

ದಾಖಲೀಕರಣಕ್ಕೆ ನೆರವು ಬೇಕಾ? ಇಲ್ಲಿದೆ ಬ್ಯಾಂಡಿಝಿಪ್. ಇದು ದಾಖಲೀಕರಣಕ್ಕೆ ನೆರವಾಗುವ ಅತ್ಯಂತ ವೇಗದ ಅಪ್ಲಿಕೇಶನ್. ಇದು ವಿನ್ ಝಿಪ್, 7–ಝಿಪ್, ವಿನ್ಆರ್ಎಆರ್ ಮೊದಲಾದ ದಾಖಲೀಕರಣ ಕ್ರಮಗಳನ್ನು ಬೆಂಬಲಿಸುತ್ತದೆ. ಇದು ಉದ್ದೇಶಿತ ಫೋಲ್ಡರ್‌ಗೆ ಬೇಕಾದ ಫೈಲ್‌ಗಳನ್ನು ವೇಗವಾಗಿ 'ಡ್ರ್ಯಾಗ್ ಮತ್ತು ಡ್ರಾಪ್' ಮೂಲಕ ಎಳೆದು ಹಾಕುತ್ತದೆ. .ಇಎಕ್ಸ್ಇ ಫೈಲ್‌ಗಳನ್ನು ಸೃಷ್ಟಿಸುತ್ತದೆ. ಸ್ಪ್ಲಿಟ್ ದಾಖಲೆಗಳನ್ನೂ ಮಾಡುತ್ತದೆ. ವಿಂಡೋಸ್ ಎಕ್ಸ್‌ಪ್ಲೋರರ್ ಮೂಲಕ ಒಂದೇ ಬಾರಿಗೆ ಬಹು ಸಂಖ್ಯೆಯಲ್ಲಿ ಝಿಪ್ ಫೈಲ್‌ಗಳನ್ನು ಸೃಷ್ಟಿಸಬಹುದು ಅಥವಾ ಎಳೆದು ಹಾಕಬಹುದು. ಜೊತೆಗೆ ಇದು ಯೂನಿಕೋಡ್ ಅನ್ನು ಬೆಂಬಲಿಸುತ್ತದೆ. ಉಚಿತ ಕೂಡಾ. www.bandicam.com/bandizip ನೋಡಿ.







## ಟ್ವೀಟ್‌ಕಾಸ್ಟರ್

ಅಚ್ಚರಿ ಮೂಡಿಸುವಷ್ಟು ವೇಗ, ಆಕರ್ಷಕ ವೈವಿಧ್ಯತೆಗಳೊಂದಿಗೆ ಬಂದಿರುವ ಈ ಅಪ್ಲಿಕೇಶನ್ ನಂಬರ್ ವನ್ ಆ್ಯಂಡ್ರಾಯ್ಡ್ ಟ್ವಿಟ್ಟರ್ ಅಪ್ಲಿಕೇಶನ್ ಎನಿಸಿಕೊಂಡಿದೆ. ಸರ್ಚ್ ಪಾರ್ಟಿಯಿಂದ ಟ್ವೀಟ್‌ಗಳನ್ನು ಶೋಧಿಸಬಹುದು. ಸ್ಮಾರ್ಟ್‌ಲಿಸ್ಟ್ ಸ್ನೇಹಿತರ ಪಟ್ಟಿಯನ್ನು ಒಂದರ ಕೆಳಗೆ ಒಂದು ಬರುವಂತೆ ಮಾಡುತ್ತದೆ.

ಫೋಟೊ ಎಫೆಕ್ಟ್ ನೀವು ಲಗತ್ತಿಸಿರುವ ಫೋಟೊಗಳಿಗೆ ಹೆಚ್ಚುವರಿ ಪರಿಣಾಮಗಳನ್ನು ನೀಡುವುದಲ್ಲದೇ ಶೀರ್ಷಿಕೆಗಳನ್ನು ಸೇರಿಸುವ ಕೆಲಸವನ್ನು ಸರಳಗೊಳಿಸಿದೆ. ಸ್ಪೀಕ್ ಟ್ವೀಟ್ ಅಪ್ಲಿಕೇಶನ್ ನ್ಯೂ ಟ್ವೀಟ್ ಪರದೆಯ ಮೇಲಿನ ಮೈಕ್ರೋಫೋನ್ ಅನ್ನು ಚಾಲೂ ಮಾಡುವುದಲ್ಲದೇ ಟೈಪ್ ಮಾಡುವ ಬದಲು ಅದರಲ್ಲಿ ಮಾತನಾಡಲು ಅನುವು ಮಾಡಿಕೊಡುತ್ತದೆ. ಝಿಪ್ ಇಟ್ ನಲ್ಲಿ ನಿಮಗೆ ಬೇಡದ ಟ್ವೀಟ್‌ಗಳನ್ನು ಗುಡ್ಡೆ ಹಾಕಬಹುದು. ಈ ಅಪ್ಲಿಕೇಶನ್ ಉಚಿತ.

## ವೈಸ್‌ಕೇರ್ 365

ಇದು ವಿಂಡೋಸ್‌ಗೆ ರಕ್ಷಣೆ ಒದಗಿಸುವುದಲ್ಲದೇ, ಸ್ವಚ್ಛವಾಗಿ ಮತ್ತು ವೇಗವಾಗಿರುವಂತೆ ನೋಡಿಕೊಳ್ಳುತ್ತದೆ. ಇದು ವಿಂಡೋಸ್ ರಿಜಿಸ್ಟ್ರಿಯನ್ನು ಆಗಾಗ ಸ್ವಚ್ಛಗೊಳಿಸಿ ಹಾರ್ಡ್‌ಡಿಸ್ಕ್‌ನಲ್ಲಿ ಹೆಚ್ಚು ಜಾಗವನ್ನು ಮಾಡಿಕೊಡುತ್ತದೆ. ನಿಮ್ಮ ವೈಯಕ್ತಿಕ ದಾಖಲೆಯನ್ನು ಅಳಿಸಿ ಹಾಕಿ, ಇತರರು ಅನಧಿಕೃತವಾಗಿ ಅವುಗಳನ್ನು ಬಳಸದಂತೆ ತಡೆಯುತ್ತದೆ. ಜೊತೆಗೆ ಕಂಪ್ಯೂಟರ್ ಅನ್ನು ಆಟೋ ಶಟ್‌ಡೌನ್ ಮಾಡುತ್ತದೆ. ಡೌನ್‌ಲೋಡ್: www.wisecleaner.com/wisecare365.html




## ರಾಕೆಟ್ ಡಾಕ್

ಇದು ಅನಿಮೇಶನ್ ಅಪ್ಲಿಕೇಶನ್. ಶಾರ್ಟ್‌ಕಟ್ ಸೃಷ್ಟಿಸಲು ನಯವಾದ ಮೇಲ್ಮೈ ಒದಗಿಸುತ್ತದೆ. ಇದು ಕ್ವಿಕ್‌ಲಾಂಚ್‌ನಂತೆ ಕೆಲಸ ಮಾಡುತ್ತದೆ. ಪ್ರತಿಯೊಂದು ಐಕಾನ್ ಅನ್ನು ಮೂಲ ಫೈಲ್‌ಗೆ ಒಯ್ಯುತ್ತದೆ. www.rocket.com ನೋಡಿ.

## ಡ್ರಾಪ್‌ಬಾಕ್ಸ್

ಒಂದೇ ಫೋಲ್ಡರ್‌ನಲ್ಲಿ ನಿಮಗೆ ಬೇಕಾದ ಫೈಲ್‌ಗಳನ್ನು ಕ್ರೋಢೀಕರಿಸಲು ನೆರವಿಗೆ ಬಂದಿದೆ ಕ್ಲೌಡ್ ಆಧಾರಿತ ಡ್ರಾಪ್‌ಬಾಕ್ಸ್. ನಿಮ್ಮ ಕಂಪ್ಯೂಟರ್‌ನಲ್ಲಿರುವ ಫೈಲ್‌ಗಳನ್ನು ಬ್ಲ್ಯಾಕ್‌ಬೆರಿಗೆ ವರ್ಗಾವಣೆ ಮಾಡಬಲ್ಲದು. ಅದೂ ಏಕೈಕ ಫೋಲ್ಡರ್‌ನಲ್ಲಿ. ನಿಮ್ಮ ಎಲ್ಲಾ ಕಂಪ್ಯೂಟರ್ ಮತ್ತು ಮೊಬೈಲ್ ಅನ್ನು ಏಕಕಾಲಕ್ಕೆ ಸಂಪರ್ಕಿಸಿ ನೀವು ಎಲ್ಲಿ ಹೋದರೂ ಸುರಕ್ಷಿತವಾಗಿ ನಿಮ್ಮ ಫೈಲ್‌ಗಳನ್ನು ನೋಡಬಹುದು. ಅಳವಡಿಸುವುದು ಸುಲಭ. ಹಿಂದೆ ಡಿಲೀಟ್ ಮಾಡಿದ ಫೈಲ್‌ಗಳನ್ನು ಕೂಡಾ ನೀವು ತೆರೆಯಬಹುದು.

■ ಎಸ್.ತುಂಬೆ